ಬೆಂಗಳೂರು ಮಹಾನಗರದಲ್ಲಿ ಟ್ರಾಫಿಕ್ ಸಮಸ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 30(522)

ಸದಸ್ಯರ ಹೆಸರು ಶ್ರೀ ರೇವಣ್ಣ ಹೆಚ್ ಎಂ (ಮಾಗಡಿ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ಬೆಂಗಳೂರು ಮಹಾನಗರದಲ್ಲಿ ಟ್ರಾಫಿಕ್ ಸಮಸ್ಯೆ ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಂಚಾರಿ ನಿಯಂತ್ರಣಕ್ಕಾಗಿ ಮಹಾನಗರ ವ್ಯಾಪ್ತಿಯಲ್ಲಿ ಖಾಸಗಿ ವಾಹನ (ಟೈಗರ್)ಗಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಯಾವ ಆದೇಶದ ಅನ್ವಯ ಯಾವ ಆಧಾರದ ಮೇಲೆ ಈ ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ?

ಈ) ಸಂಚಾರಿ ನಿಯಂತ್ರಣಕ್ಕಾಗಿ ಹಾಲಿ ಎಷ್ಟು ಟೈಗರ್ ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ?

ಉ) ಟೈಗರ್ ವಾಹನಗಳಿಂದ ವಾಹನ ಮಾಲೀಕರಿಗೆ ಕಿರುಕುಳ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ಕಿರುಕುಳ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉತ್ತರ

ಅ) ಬಂದಿದೆ

ಆ) ಹೌದು

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್‌ಟಿಡಿ 1 ಟಿಟಿಆರ್ 89, ದಿನಾಂಕ 12 6 89

2) ಸರ್ಕಾರದ ಪತ್ರ ನಂ ಹೆಚ್‌ಟಿಡಿ 37 ಟಿಎಂಆರ್ 95, ದಿಃ 14 3 96

ಈ) 38 ವಾಹನಗಳು (32 ಖಾಸಗಿ ಮತ್ತು 6 ಸರ್ಕಾರಿ)

ಉ) ಇಲ್ಲ

ಊ) ಉದ್ಭವಿಸುವುದಿಲ್ಲ

ಕೆಂಪೇಗೌಡ ಸಾರಿಗೆ ಬಸ್ ನಿಲ್ದಾಣದಲ್ಲಿ ಕ್ಯೂ ಪದ್ಧತಿ ಜಾರಿಗೆ ತರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 32(164)

ಸದಸ್ಯರ ಹೆಸರು ಶ್ರೀ ರಾಮಲಿಂಗಾರೆಡ್ಡಿ(ಜಯನಗರ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ಬೆಂಗಳೂರಿನ ಕೆಂಪೇಗೌಡ ನಗರ ಸಾರಿಗೆ ಬಸ್ ನಿಲ್ದಾಣದಿಂದ ಪ್ರತಿದಿನ ವಿವಿಧ ಭಾಗಗಳಿಗೆ ಹೋಗುವ ಬಸ್‌ಗಳ ಸಂಖ್ಯೆ ಎಷ್ಟು?

ಆ ಈ ಬಸ್ ನಿಲ್ದಾಣದಲ್ಲಿ ಕ್ಯೂ ಪದ್ಧತಿ ಇಲ್ಲದೇ ಇರುವುದರಿಂದ, ವೃದ್ಧರು, ಹೆಂಗಸರು, ಮಕ್ಕಳು ಬಸ್ ಹತ್ತಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ ಹಾಗಿದ್ದಲ್ಲಿ, ಹೊರಡುವ ಎಲ್ಲಾ ಬಸ್ಸುಗಳಿಗೆ ಕ್ಯೂ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಉತ್ತರ

ಅ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರತಿದಿನ ನಗರದ ವಿವಿಧ ಭಾಗಗಳಿಗೆ 1102 ಬಸ್ಸುಗಳನ್ನು 7705 ಸುತ್ತುವಳಿಗಳೊಂದಿಗೆ ಆಚರಣೆ ಮಾಡುತ್ತಿದೆ

ಆ ಈ ನಿಲ್ದಾಣದಲ್ಲಿ 25 ಪ್ಲಾಟ್‌ಫಾರಂಗಳಿದ್ದು, ಈ ಫ್ಲಾಟ್‌ಫಾರಂಗಳಲ್ಲಿ ಸ್ಥಳವಕಾಶ ಸಾಕಷ್ಟು ವಿಶಾಲವಾಗಿಲ್ಲದೆ ಇರುವುದರಿಂದ, ನಗರದ ವಿವಿಧ ಭಾಗಗಳಿಗೆ ಆಚರಣೆಯಾಗುವ ಹಲವಾರು ಮಾರ್ಗಗಳನ್ನು ಒಂದೇ ಪ್ಲಾಟ್‌ಫಾರಂಗೆ ಕೂಡಿಸಿ ಆಚರಣೆ ಮಾಡುವ ಸ್ಥಿತಿ ಇರುವ ಕಾರಣ ಪ್ಲಾಟ್ ಫಾರಂಗಳಲ್ಲಿ ಕ್ಯೂ ವದ್ಧತಿಯನ್ನು ಅನುಸರಿಸುವುದು ಕಷ್ಟಸಾಧ್ಯ ಆದಾಗ್ಯೂ ಪ್ರಾಯೋಗಿಕವಾಗಿ ಪ್ಲಾಟ್ ಫಾರಂ ನಂ 1